**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ, ಸುಳ್ಯ,**

**ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 184/2022**
**ಸಿ.ಡಬ್ಲ್ಯೂ–4**
**ಪಿ.ಡಬ್ಲೂ –4**

| | | |
|---|---|---|
| ಸಾಕ್ಷಿದಾರರ ಹೆಸರು | : | ಯಲ್ಲಪ್ಪ ಬಿ.ಕೆ. |
| ತಂದೆಯ ಹೆಸರು | : | ಬಮ್ಮಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು. |
| ವಾಸ | : | ಸವಣೂರು. |
| ದಿನಾಂಕ | : | 07–01–2025 |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ  ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿನಾಂಕ 07–01–2020 ರಿಂದ ಇಲ್ಲಿಯವರೆಗೆ ಪುತ್ತೂರು ವಲಯ, ಪುತ್ತೂರಿನಲ್ಲಿ ಅಬಕಾರಿ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ದಿನಾಂಕ 01–05–2021 ರಂದು ನಮ್ಮ ಇಲಾಖೆಗೆ ಬಂದ ಮಾಹಿತಿ ಮೇರೆಗೆ ಚಾ.ಸಾ.1 ರಿಂದ ಚಾ.ಸಾ.3, ನಾನು ವಾಹನ ಚಾಲಕರಾದ ಚಾ.ಸಾ.5 ರವರೊಂದಿಗೆ ನಮ್ಮ ಇಲಾಖಾ ವಾಹನದ ಸಂಖ್ಯೆ ಕೆಎ–18–ಜಿ–0715 ನೇದ್ದರಲ್ಲಿ ನಮ್ಮ ಕಚೇರಿಯಿಂದ ಬೆಳಗ್ಗೆ 7.00 ಗಂಟೆಗೆ ಹೊರಟು ಪುತ್ತೂರು–ಕುಂಬ್ರ–ಜಾಲ್ಸೂರು ಮಾರ್ಗವಾಗಿ ಅಡ್ಕಾರು ಎಂಬಲ್ಲಿ ಬಲಕ್ಕೆ ತಿರುಗಿ, ನಂತರ ಸುಳ್ಯ–ಅಜ್ಜಾವರ –ಮಂಡೆಕೋಲು ಮಾರ್ಗವಾಗಿ, ಮಂಡೆಕೋಲು ಪೇಟೆಯಿಂದ ಸುಮಾರು 2 ಕಿಲೋ ಮೀಟರು ಮುಂದಕ್ಕೆ ಬಂದು, ಅಲ್ಲಿಂದ ಬಲಕ್ಕೆ

ಸಾಕ್ಷಿಯ ಸಹಿ                    ನ್ಯಾಯಾಧೀಶರ ಸಹಿ

ಕಚ್ಚಾ ರಸ್ತೆಯ ಮೂಲಕ ಸಾಗಿ ಸುಮಾರು 150 ಮೀಟರು ದೂರದಲ್ಲಿ ಧರ್ಮ ದೈವಸ್ಥಾನ ಕಂಡು ಬಂದಿದ್ದು, ನಂತರ ನಮ್ಮ ಇಲಾಖಾ ವಾಹನದಿಂದ ಕೆಳಗೆ ಇಳಿದು, ದೈವಸ್ಥಾನ ಹಿಂಬದಿಯಲ್ಲಿದ್ದ ಮನೆಗೆ ತೆರಳುವ ಸಮಯದಲ್ಲಿ, ಸದರಿ ಮನೆಯ ಅಂಗಳದಲ್ಲಿ ಓರ್ವ ವ್ಯಕ್ತಿಯು ನಿಂತಿದ್ದು, ಸಮವಸ್ತ್ರದಲ್ಲಿದ್ದ ನಮ್ಮನ್ನು ಕಂಡು ತನ್ನ ಮನೆಯ ಮುಂಭಾಗದಲ್ಲಿದ್ದ ಅಡಿಕೆ ತೋಟದೊಳಗೆ ಓಡಿ ಹೋಗಿರುತ್ತಾರೆ.

ತಕ್ಷಣ ನಾವೆಲ್ಲರೂ ಸದರಿ ವ್ಯಕ್ತಿಯನ್ನು ಬೆನ್ನಟ್ಟಿದ್ದರೂ ಸದರಿ ವ್ಯಕ್ತಿಯು ನಮಗೆ ಸಿಕ್ಕಿರುವುದಿಲ್ಲ. ನಂತರ ನಾವು ತೋಟದಿಂದ ಸದರಿ ವ್ಯಕ್ತಿಯ ಮನೆಗೆ ಬಂದಾಗ, ಸದರಿ ಮನೆಯೊಳಗಡೆಯಿಂದ ಓರ್ವ ಮಹಿಳೆಯು ಹೊರಗೆ ಬಂದಾಗ, ಅವರಲ್ಲಿ ಓಡಿ ಹೋದ ವ್ಯಕ್ತಿಯ ಬಗ್ಗೆ ವಿಚಾರಿಸಿದಾಗ, ಸದರಿ ಓಡಿ ಹೋದ ವ್ಯಕ್ತಿಯು ತನ್ನ ಪತಿಯಾಗಿದ್ದು, ಹಾಗೂ ಅವರ ಹೆಸರು ವಿಶ್ವನಾಥ ಗೌಡ ಎಂದು ನಮಗೆ ತಿಳಿಸಿರುತ್ತಾರೆ.

ಪಂಚರಾಗಿ ಸಹಕರಿಸಲು ಅಕ್ಕ-ಪಕ್ಕದ ಮನೆಯವರಲ್ಲಿ ಕೋರಿಕೊಂಡಾಗ, ಕೊರೋನಾ ಸಮಯವಾದದ್ದರಿಂದ ಯಾರೂ ಸಹ ಪಂಚರಾಗಿ ಬರಲು ಒಪ್ಪಿರುವುದಿಲ್ಲ. ನಂತರ ಸ್ಥಳದಲ್ಲಿ ನಾವೇ ಪಂಚರಾಗಿ, ಸದರಿ ಮನೆಯನ್ನು ಶೋಧನೆ ನಡೆಸಲು ನ್ಯಾಯಾಲಯದಿಂದ ಶೋಧನಾ ಸಮುಚ್ಚಿತ ಆಧಾರವನ್ನು ಪಡೆಯಲು ಸಮಯಾವಕಾಶ ಇಲ್ಲದಿರುವುದರಿಂದ ಅಧಿಕಾರಿಯವರು ಸ್ಥಳದಲ್ಲಿಯೇ ಸಮುಚ್ಚಿತ ಆಧಾರದಲ್ಲಿ ತಯಾರಿಸಿ, ನಮ್ಮ ಹಾಗೂ ಸದರಿ ಮನೆಯಲ್ಲಿದ್ದ ಮಹಿಳೆಯ

ಸಮಕ್ಷಮದಲ್ಲಿ ಸದರಿ ಮನೆಯ ಒಳಗಡೆ ಪ್ರವೇಶಿಸಿ, ಶೋಧಿಸಲಾಗಿ, ಅಲ್ಲಿ ಅಬಕಾರಿಗೆ ಸಂಬಂಧಪಟ್ಟ ಸ್ವತ್ತುಗಳು ಯಾವುದೇ ಕಂಡು ಬಂದಿರುವುದಿಲ್ಲ.

ನಂತರ ಮನೆಯ ಎಡಭಾಗಕ್ಕೆ ಹೊಂದಿಕೊಂಡಿರುವ ಹಂಚಿನ ಛಾವಣಿಯ ಶೆಡ್‌ನಲ್ಲಿ ಹುಡುಕಾಡಿದಾಗ, ಒಣಗಿದ ಎಲೆಗಳ ಅಡಿಯಲ್ಲಿ 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಮ್ ಹಾಗೂ 10 ಲೀಟರ್ ಸಾಮಾರ್ಥ್ಯದ ಬಿಳಿ ಪ್ಲಾಸ್ಟಿಕ್ ಡಬ್ಬ ಕಂಡು ಬಂದಿರುತ್ತದೆ. ಸದರಿ ಪ್ಲಾಸ್ಟಿಕ್ ಡ್ರಮ್ ಹಾಗೂ ಡಬ್ಬದ ಮುಚ್ಚಳವನ್ನು ತೆರೆದು ನೋಡಿದಾಗ ಅವುಗಳಲ್ಲಿ ಒಟ್ಟಾಗಿ 35 ಲೀಟರ್ ಗೇರು ಹಣ್ಣಿನ ಕೊಳೆ ರಸ ಇರುವುದು ಕಂಡು ಬಂದಿರುತ್ತದೆ. ನಂತರ ಅದರ ಪಕ್ಕದಲ್ಲಿಯೇ ಇದ್ದ ಒಣಗಿದ ತೆಂಗಿನ ಗರಿಗಳ ಕಟ್ಟಿನ ಅಡಿಯಲ್ಲಿ ತಲಾ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಯಿದ್ದು, ಅವುಗಳಲ್ಲಿ 2 ಲೀಟರ್ ನಷ್ಟು ಗೇರು ಹಣ್ಣಿನ ಕಳ್ಳಭಟ್ಟಿ ಸಾರಾಯಿಯು ಇರುವುದು ಪತ್ತೆಯಾಗಿರುತ್ತದೆ.

ನಂತರ ನಮಗೆ ದೊರೆತ 25 ಲೀಟರ್ ಸಾಮಾರ್ಥ್ಯದ ನೀಲಿ ಬಣ್ಣದ ಪ್ಲಾಸ್ಟಿಕ್ ಡ್ರಮ್ ನಿಂದ ಒಂದು ಲೀಟರ್ ಗೇರು ಹಣ್ಣಿನ ಕೊಳೆ ರಸ ಹಾಗೂ 10 ಲೀಟರ್ ಸಾಮಾರ್ಥ್ಯದ ಬಿಳಿ ಬಣ್ಣದ ಪ್ಲಾಸ್ಟಿಕ್ ಡಬ್ಬದಿಂದ ಪ್ರತ್ಯೇಕವಾಗಿ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ ಗೇರು ಹಣ್ಣಿನ ಕೊಳೆ ರಸವನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದಿರುತ್ತೇವೆ. ಹಾಗೂ ತಲಾ ಒಂದು ಲೀಟರ್ ಸಾಮಾರ್ಥ್ಯದ ಎರಡು ಪ್ಲಾಸ್ಟಿಕ್ ಬಾಟಲಿಗಳಲ್ಲಿ 2 ಲೀಟರ್ ನಷ್ಟು ಗೇರು ಹಣ್ಣಿನ

ಕಳ್ಳಭಟ್ಟಿ ಸಾರಾಯಿಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕವಾಗಿ ತೆಗೆದಿರಿಸಿರುತ್ತೇವೆ. ಈ ರೀತಿ 4 ಬಾಟಲ್ ಗಳನ್ನು ಬಿಳಿ ಬಟ್ಟೆಯಲ್ಲಿ ಸುತ್ತಿ, ದಾರದಿಂದ ಕಟ್ಟಿ ಅದಕ್ಕೆ ನಮ್ಮ ಇಲಾಖಾ ಸೀಲಿನಿಂದ ಮೊಹರನ್ನು ಮಾಡಿ , ಅದೇ ಸೀಲ್ ನ ಮಾದರಿ ಮೊಹರನ್ನು ತಯಾರಿಸಿ, ನಮ್ಮ ಅಧಿಕಾರಿ ಹಾಗೂ ಸಿಬ್ಬಂದಿಗಳ ಸಹಿಯುಳ್ಳ ಮಾದರಿ ಗುರುತಿನ ಚೀಟಿಯನ್ನು ಅದಕ್ಕೆ ಅಂಟಿಸಿರುತ್ತೇವೆ. ನಂತರ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಾಗಿ ತೆಗೆದ ಉಳಿದ ಗೇರು ಹಣ್ಣಿನ ಕೊಳೆ ರಸವನ್ನು ಸ್ಥಳದಲ್ಲಿಯೇ ಚೆಲ್ಲಿ ನಾಶಪಡಿಸಿರುತ್ತೇವೆ. ಈ ರೀತಿಯಾಗಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸುವ ಉದ್ದೇಶದಿಂದ ಗೇರು ಹಣ್ಣನ್ನು ಸಂಗ್ರಹಿಸಲು ಅದು ಅಬಕಾರಿ ಕಾಯಿದೆಯಡಿಯಲ್ಲಿ ಅಪರಾಧವಾಗಿರುತ್ತದೆ.

ತಕ್ಷೀರು ಸ್ಥಳದಲ್ಲಿ ದೊರೆತ ಸ್ವತ್ತುಗಳನ್ನು ವಶಪಡಿಸಿಕೊಂಡು , ಸುಳ್ಯ ವಲಯ ಕಚೇರಿಗೆ ಬಂದಿರುತ್ತೇವೆ.

ಮಹಜರನ್ನು ಚಾ.ಸಾ.1 ರವರ ಉಕ್ತಲೇಖನದಂತೆ ನಾನು ಬರೆದಿರುತ್ತೇನೆ. ನಾನು ಈಗ ನ್ಯಾಯಾಲಯದಲ್ಲಿ ಮಹಜರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-2 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-2(ಡಿ) ಎಂದು ಗುರುತಿಸಲಾಯಿತು.

ನಾನು ಈಗ ನ್ಯಾಯಾಲಯದಲ್ಲಿ ಮಾದರಿ ಮೊಹರನ್ನು ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ-7 ಎಂದು ನಿಶಾನಿಕರಿಸಿದ್ದು, ಅದರಲ್ಲಿರುವ ನನ್ನ

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಸಹಿಯನ್ನು ನಾನು ನೋಡಿ ಒಪ್ಪಿ ಗುರುತಿಸಿದ್ದು, ಅದನ್ನು ನಿಪಿ-7(ಬಿ) ಎಂದು ಗುರುತಿಸಲಾಯಿತು.

ನಾನು ಮು.ಮಾ.1 ರಿಂದ 4 ನ್ನು ನೋಡಿ ಗುರುತಿಸುತ್ತೇನೆ. ಮು.ಮಾ.1 ರಿಂದ 4 ಗೆ ಅಂಟಿಸಿರುವ ಗುರುತಿನ ಚೀಟಿಯಲ್ಲಿ ನನ್ನ ಸಹಿ ಇರುತ್ತದೆ.

ನಾನು ನಮ್ಮ ಮೇಲಧಿಕಾರಿಯವರಿಗೆ ಹೇಳಿಕೆಯನ್ನು ನೀಡಿರುತ್ತೇನೆ.

ನಾನು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಸಿ.ವಿ.ಜಿ. ವಕೀಲರಿಂದಃ**

ನಾವು ಧಾಳಿ ನಡೆಸುವ ಸಮಯದಲ್ಲಿ ಸುಳ್ಯದ ಕಚೇರಿಯ ಸಿಬ್ಬಂದಿಗಳು ನಮ್ಮ ಜೊತೆ ಇದ್ದಿರಲಿಲ್ಲ. ನಮ್ಮ ಮೇಲಧಿಕಾರಿಯವರಿಂದ ಆದೇಶ ಬರುವ ಸಮಯದಲ್ಲಿ ನಾನು ನಮ್ಮ ಕಚೇರಿಯಲ್ಲಿ ಹಾಜರಿದ್ದೆ. ತಕ್ಷೀರು ನಡೆಯಿತು ಎನ್ನುವ ದಿನದಂದು ಬೆಳಗ್ಗೆ 6.40 ಗಂಟೆಗೆ ನಮ್ಮ ಮೇಲಧಿಕಾರಿಯವರಿಗೆ ತಕ್ಷೀರಿನ ಬಗ್ಗೆ ಬಾತ್ಮಿ ಬಂದಿರುತ್ತದೆ. ಸಾಮಾನ್ಯವಾಗಿ ನಾವು ಕಚೇರಿಯಿಂದ ದಾಳಿ ನಡೆಸುವ ಸಮಯ ನಮ್ಮ ಕಚೇರಿಯ ದಿನಚರಿ ಪುಸ್ತಕದಲ್ಲಿ ಆ ಬಾಬ್ತು ನಮೂದು ಮಾಡಬೇಕು ಎಂದರೆ ಸರಿ. ಈ ಪ್ರಕರಣದಲ್ಲಿ ಅಂತಹ ಯಾವುದೇ ದಾಖಲೆಯನ್ನು ತನಿಖಾಧಿಕಾರಿಯವರು ನನ್ನಿಂದ ಪಡೆದುಕೊಂಡಿರುತ್ತಾರೋ-ಇಲ್ಲವೋ ಎಂದು ನನಗೆ ತಿಳಿದಿರುವುದಿಲ್ಲ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ತಕ್ಷೀರು ಸ್ಥಳದ ಪರಿಚಯವು ಈ ಪ್ರಕರಣಕ್ಕೂ ಪೂರ್ವದಲ್ಲಿ ನನಗೆ ಇದ್ದಿರುವುದಿಲ್ಲ. ತಕ್ಷೀರು ಸ್ಥಳವನ್ನು ನಮಗೆ ಯಾರೂ ತೋರಿಸಿಕೊಟ್ಟಿರುವುದಿಲ್ಲ, ನಾವೇ ತಕ್ಷೀರು ಸ್ಥಳಕ್ಕೆ ಹೋಗಿರುವುದಿಲ್ಲ.

ನಮ್ಮ ಕಚೇರಿಯಿಂದ ತಕ್ಷೀರು ಮನೆಗೆ ಹೋಗುವವರೆಗೆ ಚಾ.ಸಾ.1 ರವರು ಪಂಚರನ್ನು ಬರಮಾಡಿಕೊಳ್ಳುವಂತೆ ಪ್ರಯತ್ನಿಸಿರುವುದಿಲ್ಲ. ನಾವು ಹೋದ ಮನೆಯ ಅಂಗಳದವರೆಗೂ ಯಾವುದೇ ವಾಹನಗಳು ಹೋಗುತ್ತಿರಲಿಲ್ಲ. ಸದರಿ ಮನೆಗೆ ಯಾವುದೇ ಕಂಪೌಂಡ್ ಇದ್ದಿರುವುದಿಲ್ಲ. ನಮ್ಮ ಇಲಾಖಾ ವಾಹನವನ್ನು ತಕ್ಷೀರು ಮನೆಯಿಂದ 100-150 ಮೀಟರು ದೂರದಲ್ಲಿ ನಿಲ್ಲಿಸಿರುತ್ತೇವೆ.

ತಕ್ಷೀರು ಮನೆಯಲ್ಲಿ ಇದ್ದಿದ್ದರು ಎನ್ನಲಾದ ವ್ಯಕ್ತಿಯನ್ನು ನಾನು ನಮ್ಮ ಇಲಾಖಾ ವಾಹನದಿಂದ ಇಳಿದು ಮುಂದಕ್ಕೆ ಬಂದಾಗ ಅಲ್ಲಿಂದ ಸುಮಾರು 100 ಮೀಟರು ದೂರದಿಂದ ನಾನು ನೋಡಿರುತ್ತೇನೆ. ಸದರಿ ವ್ಯಕ್ತಿಯು ಯಾವ ಬಣ್ಣದ ಉಡುಪನ್ನು ಧರಿಸಿದ್ದರು ಎಂದು ನನಗೆ ತಿಳಿದಿರುವುದಿಲ್ಲ. ಸಾಕ್ಷಿಯು ಮುಂದುವರೆದು ಲುಂಗಿ ಹಾಗೂ ಅರ್ಧ ತೋಳಿನ ಅಂಗಿಯನ್ನು ಸದರಿ ವ್ಯಕ್ತಿಯು ಧರಿಸಿದ್ದರು ಎಂದು ನುಡಿಯುತ್ತಾರೆ.

ಸದರಿ ಓಡಿ ಹೋದ ವ್ಯಕ್ತಿಯನ್ನು ಬೆನ್ನಟ್ಟಿ ಹಿಡಿಯಲು ನಾವು ಪ್ರಯತ್ನಿಸಿರುತ್ತೇವೆ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಸದರಿ ಮನೆಯಲ್ಲಿ ಎಷ್ಟು ಕೋಣೆಗಳು ಇತ್ತು ಎಂದು ನನಗೆ ಈಗ ನೆನಪಿರುವುದಿಲ್ಲ. ಸದರಿ ಮನೆಗೆ ಹೊಂದಿಕೊಂಡು ಹಂಚು ಛಾವಣಿಯ ಒಂದು ಶೆಡ್ ಇತ್ತು. ಸದರಿ ಮನೆಗೆ ಮನೆ ನಂಬ್ರ ಇತ್ತಾ ಎಂದು ನಾನು ನೋಡಿರುವುದಿಲ್ಲ. ಸದರಿ ಶೆಡ್ ಗೆ ಕಟ್ಟಡ ನಂಬ್ರ ಇತ್ತಾ ಎಂದು ನಾನು ನೋಡಿರುವುದಿಲ್ಲ.

ಕಳ್ಳಭಟ್ಟಿ ಸಾರಾಯಿ ತಯಾರಿಸಲು ಯಾವೆಲ್ಲಾ ಸಲಕರಣೆಗಳು ಬೇಕು ಎಂದು ನನಗೆ ತಿಳಿದಿರುತ್ತದೆ. ಅಂತಹ ಯಾವುದೇ ಸಲಕರಣೆಗಳು ಶೆಡ್ ನಲ್ಲಿ ಇದ್ದಿರುವುದಿಲ್ಲ.

ನಮಗೆ ದೊರೆತ ಗೇರು ಹಣ್ಣಿನ ಕೊಳೆ ರಸವನ್ನು ನಾಶಪಡಿಸಬೇಕಾದರೆ ನಾವು ನಮ್ಮ ಮೇಲಧಿಕಾರಿಗಳ ಅನುಮತಿಯನ್ನು ಪಡೆಯಬೇಕು ಎಂದರೆ ಸರಿ. ನಮಗೆ ದೊರೆತ ಪ್ಲಾಸ್ಟಿಕ್ ಡ್ರಮ್‌ಗಳು ನಮ್ಮ ಕಚೇರಿಯಲ್ಲಿ ಇದ್ದು, ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಎರಡು ಪ್ಲಾಸ್ಟಿಕ್ ಡ್ರಮ್ ನಲ್ಲಿ ಗೇರು ಹಣ್ಣಿನ ಸಂಗ್ರಹ ಇತ್ತು. ಗೇರು ಹಣ್ಣನ್ನು ಹಾಗೆಯೇ ಬಿಟ್ಟರೆ ನೈಸರ್ಗಿಕವಾಗಿ ಅದರಲ್ಲಿ ಮದ್ಯದ ಅಂಶವು ಉತ್ಪತ್ತಿಯಾಗುತ್ತದೆ ಎಂದರೆ ಸರಿ. ಗೇರು ಹಣ್ಣಿನ ಕೊಳೆ ರಸವನ್ನು ಕೂಡಾ ಹಾಗೆ ಬಿಟ್ಟರೆ ದಿನಕಳೆದಂತೆ ಕ್ರಮೇಣವಾಗಿ ಮದ್ಯದ ಅಂಶವು ಅಧಿಕವಾಗಿ ಹೋಗುತ್ತದೆ ಎಂದರೆ ಸರಿ.

ಸದರಿ ಮನೆಯಲ್ಲಿ ಓರ್ವ ಹೆಂಗಸು ಹಾಗೂ ಮಕ್ಕಳು ಇದ್ದಿದ್ದರು. ಆದರೆ ನಿಖರವಾಗಿ ಎಷ್ಟು ಮಕ್ಕಳು ಇದ್ದರು ಎಂದು ನನಗೆ ಈಗ ನೆನಪಿರುವುದಿಲ್ಲ. ಸದರಿ ಮನೆಯಲ್ಲಿದ್ದ ಮಹಿಳೆಯ ಹೇಳಿಕೆಯನ್ನು ನಾವು ಪಡೆದುಕೊಂಡಿರುತ್ತೇವೆ.

ಸಾಕ್ಷಿಯ ಸಹಿ                                    ನ್ಯಾಯಾಧೀಶರ ಸಹಿ

ತಕ್ಷೀರಿನ ಸಮಯ ಕೊರೋನಾ ಕಾಲವಾಗಿತ್ತು ಎಂದರೆ ಸರಿ .

ನಿಪಿ-2 ನ್ನು ತಕ್ಷೀರು ಸ್ಥಳದಲ್ಲಿ ನಾನೇ ಬರೆದಿರುತ್ತೇನೆ. ನಿಪಿ-2 ನ್ನು ಮನೆಯ ಮುಂಭಾಗದಲ್ಲಿ ಇದ್ದ ಕಟ್ಟೆಯಲ್ಲಿ ನಾನು ಬರೆದಿರುತ್ತೇನೆ .

ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ನಾನಾಗಲೀ, ನಮ್ಮ ಅಧಿಕಾರಿಯಾಗಲೀ ತಕ್ಷೀರು ಮನೆಗೆ ಹೋದದ್ದೇ ಇಲ್ಲ ಎಂದರೆ ಸರಿಯಲ್ಲ. ಕೊರೋನಾ ಕಾಲದಲ್ಲಿ ನಮ್ಮ ಇಲಾಖಾ ಅಂಕಿ-ಅಂಶಗೋಸ್ಕರ ಚಾ.ಸಾ.1 ರವರು ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮುದ್ದೆ ಮಾಲುಗಳಿಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ತಕ್ಷೀರು ಮನೆಯಲ್ಲಿ ಯಾವುದೇ ಸ್ವತ್ತು ದೊರೆತಿದ್ದು ಇಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಮಹಜರನ್ನು ತಕ್ಷೀರು ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ಪೂರಕವಾಗಿ ನಾನು ಹೇಳಿದ ಎಲ್ಲಾ ದಾಖಲೆಗಳನ್ನು ನಮ್ಮ ಕಚೇರಿಯಲ್ಲಿಯೇ ಕುಳಿತು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ದಾಖಲೆಗಳಿಗೆ ಹಾಕಿರುವ ಸಹಿಗಳನ್ನು ನಮ್ಮ ಕಚೇರಿಯಲ್ಲಿ ನಾನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಪ್ರಾಯಸ್ಥರಾಗಿದ್ದ ಕಾರಣ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಓಡಿ ಹೋಗಿ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಧಿಕಾರಿಯವರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ನಾನು

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ

ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ತಕ್ಷೀರು ಸ್ಥಳದಿಂದ ನಾವು ಯಾವುದೇ ಸ್ವತ್ತನ್ನು ವಶಪಡಿಸಿಕೊಂಡದ್ದು ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ:** ಇಲ್ಲ.

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ

ನ್ಯಾಯಾಧೀಶರ ಸಹಿ